# ‘ನಟನೆಯೆಂದರೆ ಅನುಕರಣೆ

ಪದ್ಮನಾಭ ಭಟ್

ಚಂದನವನದಲ್ಲಿ ಈಗಷ್ಟೇ ಚಿಗುರಿಕೊಳ್ಳುತ್ತಿರುವ ಚೈತ್ರಾ ಆಚಾರ್, ಮಾತಿಗೆ ನಿಂತರೆ ಉಸಿರು ಯಾವಾಗ ಎಳೆದುಕೊಂಡರು ಎಂಬುದೇ ಗೊತ್ತಾಗುವುದಿಲ್ಲ. ಮಾತಿನಲ್ಲಿ ಇರುವ ಚುರುಕು ನಟನೆಯಲ್ಲಿಯೂ ಇದೆ.

12ನೇ ತರಗತಿ ಅಂಕಪಟ್ಟಿಯನ್ನು ಕೈಲಿ ಹಿಡಿದುಕೊಂಡಿದ್ದ ಹುಡುಗಿ ತಂದೆಯ ಎದುರು ನಿಂತಿದ್ದಳು. ಮಗಳ ಮುಖ ನೋಡಿ ನಗುವಾಗಲೇ ಅವಳಿಂದ ಅನಿರೀಕ್ಷಿತವಾದ ಮಾತೊಂದು ತೂರಿಬಂದಿತ್ತು. ‘ಅಪ್ಪಾ, ನಾನು ದೆಹಲಿಯಲ್ಲಿರುವ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಸೇರಿಕೊಳ್ಳಲಾ? ನನಗೆ ನಟನೆ ಅಂದ್ರೆ ಇಷ್ಟ’. ತಂದೆ ಒಂದು ಕ್ಷಣ ದಂಗಾಗಿದ್ದರು. ಮರುಕ್ಷಣದಲ್ಲಿಯೇ, ‘ಈಗ ನೀನು ಓದು ಮುಗಿಸು. ಮೆಡಿಕಲ್ ಅಥವಾ ಎಂಜಿನಿಯರಿಂಗ್ ಓದು. ನಂತರ ನೋಡೋಣ’ ಎಂಬ ಉತ್ತರವನ್ನೂ ಕೊಟ್ಟಿದ್ದರು. ಅದಕ್ಕೆ ಒಪ್ಪಿಗೆ ಸೂಚಿಸುವ ಹಾಗೆ ಮಗಳು ತಲೆಯೇನೋ ಆಡಿಸಿದ್ದಳು. ಆದರೆ ಅವಳ ಕಣ್ಣುಗಳಲ್ಲಿನ ಕನಸುಗಳು ಆಗಲೇ ತಮ್ಮ ದಾರಿಯನ್ನು ಆಯ್ದುಕೊಂಡಾಗಿತ್ತು.

ಚೈತ್ರಾ ಆಚಾರ್ ಎಂಬ ಆ ಹುಡುಗಿ ಈಗ ಚಂದನವನದಲ್ಲಿ ಗಮನಸೆಳೆಯುತ್ತಿರುವ ಹೊಸ ಪ್ರತಿಭೆ. ತಂದೆಯ ಆಸೆಯಂತೆ ಎಂಜಿನಿಯರಿಂಗ್ ಕಾಲೇಜು ಸೇರಿಕೊಂಡರೂ ಅವರ ಗಮನವೆಲ್ಲ ಇದ್ದಿದ್ದು ಅಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳು, ನಾಟಕೋತ್ಸವಗಳು, ಕಿರುಚಿತ್ರಗಳ ಮೇಲೆಯೇ.

ಚೈತ್ರಾ ಮೊದಲ ಬಾರಿಗೆ ಕ್ಯಾಮೆರಾ ಎದುರಿಸಿದ್ದು ಅನೀಶ್ ತೇಜೇಶ್ವರ್ ನಿರ್ಮಾಣದ ‘ಬೆಂಗಳೂರು ಕ್ವೀನ್ಸ್’ ಎಂಬ ವೆಬ್ ಸೀರೀಸ್‌ನಲ್ಲಿ. ಈ ಸೀರೀಸ್‌ನ ಮೂರು ಪ್ರಮುಖ ಪಾತ್ರಗಳಲ್ಲಿ ಚೈತ್ರಾ ಕೂಡ ಒಂದು ಪಾತ್ರದಲ್ಲಿ ನಟಿಸಿದ್ದರು.

‘ನಾನು ಮೊದಲು ನಟಿಸಿದ ವೆಬ್ ಸೀರೀಸ್‌ನಿಂದಲೇ ಸಿನಿಮಾ ನಟನೆಯ ಬಗ್ಗೆ ಆಸಕ್ತಿ ಹೆಚ್ಚಾಗಲು ಕಾರಣವಾಯ್ತು. ಅಲ್ಲಿನ ದೊಡ್ಡ ಕ್ಯಾಮೆರಾ, ಬೇರೆ ಬೇರೆ ವಿಭಾಗಗಳು ಎಲ್ಲವೂ ಆಸಕ್ತಿ ಹುಟ್ಟಿಸಿದವು. ಆದರೆ ನಟಿಯಾಗಿಯೇ ಮುಂದುವರಿಯುತ್ತೇನೆ ಎಂಬ ವಿಶ್ವಾಸ ಇರಲಿಲ್ಲ. ಆ ಸೀರೀಸ್ ಮುಗಿಸಿ ಮತ್ತೆ ಕಾಲೇಜಿನಲ್ಲಿ ಬ್ಯುಸಿಯಾಗಿಬಿಟ್ಟೆ’ ಎಂದು ನೆನಪಿಸಿಕೊಳ್ಳುವ ಚೈತ್ರಾ ಅವರನ್ನು ಮತ್ತೆ ಸಿನಿಮಾಲೋಕಕ್ಕೆ ಕರೆತಂದಿದ್ದು ನಿರ್ದೇಶಕ ಗುರುಪ್ರಸಾದ್ ಅವರ ‘ಅದೇಮಾ’. ಆಡಿಷನ್ ಮೂಲಕವೇ ಆ ಸಿನಿಮಾಗೆ ಆಯ್ಕೆಯಾದ ಅವರಿಗೆ ಚಿತ್ರೀಕರಣಕ್ಕೆ ಹೋಗುವವರೆಗೂ ತಾನೇ ಆ ಚಿತ್ರದ ನಾಯಕಿ ಎಂಬುದೇ ಗೊತ್ತಿರಲಿಲ್ಲವಂತೆ!

‘ಗುರುಪ್ರಸಾದ್ ಅವರ ಜೊತೆಗೆ ಕೆಲಸ ಮಾಡಿದ್ದು ನನಗೆ ಸಾಕಷ್ಟು ಕಲಿಕೆಯನ್ನೂ, ಖುಷಿಯನ್ನೂ ಕೊಟ್ಟಿತು. ಆ ಸಿನಿಮಾ ಅರ್ಧಕ್ಕೆ ನಿಂತುಹೋಯಿತು. ಆ ಕುರಿತು ಬೇಜಾರು ಇದೆ’ ಎನ್ನುತ್ತಾರೆ ಚೈತ್ರಾ. ಕಾಲೇಜು ಮುಗಿಯುತ್ತಿದ್ದ ಹಾಗೆಯೇ ಅವರಿಗೆ ಮಹೇಶ್ ಗೌಡ ಅವರ ‘ಮಹಿರ’ ಸಿನಿಮಾದಲ್ಲಿ ನಟಿಸುವ ಅವಕಾಶ ಬಂತು.

ಅವರು ನಟಿಸಿರುವ ‘ಗಿಲ್ಕಿ’ ಮತ್ತು ‘ತಲೆದಂಡ’ ಸಿನಿಮಾಗಳು ಬಿಡುಗಡೆಯಾಗಿವೆ. ‘ಸ್ಟ್ರಾಬೆರ್ರಿ’, ‘ಯಾರಿಗೂ ಹೇಳ್ಬೇಡಿ’ ಸಿನಿಮಾಗಳು ಚಿತ್ರೀಕರಣ ಹಂತದಲ್ಲಿವೆ. ‘ಹ್ಯಾಪಿ ಬರ್ತ್‌ಡೆ ಟು ಮಿ’ ಮತ್ತು ‘ಬ್ಲಿಂಕ್’ ಎಂಬ ಸಿನಿಮಾಗಳು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿವೆ. ಹೀಗೆ ಒಂದರ ಹಿಂದೆ ಇನ್ನೊಂದರಂತೆ ಅವಕಾಶಗಳು

